# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC 1102/2025** **PW- 2**

ದಿಃ **14.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಮ್ ಎಮ್ ಆರ್ ವಕೀಲರಿಂದಃ**

ನನ್ನ ಮಗ ಖಾಸಗಿಯಾಗಿ ಕಂಪ್ಯೂಟರ್ ಕೆಲಸ ಮಾಡುತ್ತಾರೆ. ನಾನು ನಿವೃತ್ತ ನೌಕರ. ನನಗೆ ರೂ 1,700/- ನಿವೃತ್ತಿ ವೇತನ ಬರುತ್ತದೆ. ನನ್ನ ಮಗನಿಗೆ ರೂ 10,000/- ಪ್ರತಿ ತಿಂಗಳು ಬರುತ್ತದೆ. ನನ್ನ ಹೆಂಡತಿ ದುಡಿಯಲು ಹೊಗುವುದಿಲ್ಲ. ನನ್ನ ನಿವೃತ್ತಿ ವೇತನ ಹಾಗೂ ನನ್ನ ಮಗನ ವೇತನ ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವದೇ ಆದಾಯದ ಮೂಲ ಇಲ್ಲ ಎಂದರೆ ಸರಿ. ಸನ್ 2021 ರಿಂದ ನಾನು ಮತ್ತು ಆರೋಪಿ ವ್ಯವಹಾರ ಮಾಡುತ್ತಿದ್ದೇವೆ. 2021 ರಲ್ಲಿ ಆರೋಪಿ ನನ್ನಿಂದ ರೂ 1 ಲಕ್ಷ ಸಾಲ ಪಡದಿದ್ದು, ನನಗೆ ತೋರಿದಂತೆ ದಾಖಲೆಯನ್ನು ನಾನು ಬರೆದಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಾಖಲೆಯನ್ನು ಆರೋಪಿಯ ತಂದೆಗೆ ಬರೆದುಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಇದರ ಪರಿಶೀಲನೆಗಾಗಿ ಆ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಆರೋಪಿಯ ತಂದೆಗೆ ಕೊಟ್ಟಿದ್ದ ಸಾಲ ಇನ್ನು ಮುಟ್ಟಿಲ್ಲ. ಆರೋಪಿಯ ತಂದೆಗೆ ರೂ 1 ಲಕ್ಷ ಹಣ ಕೊಟ್ಟಿದ್ದು ಆ ಹಣ ನನಗೆ ಮುಟ್ಟಿರುತ್ತದೆ ಅಂತಾ ನಿಡಿ.1 ರಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರ ಆರೋಪಿಯ ಜೊತೆ ಮಾಡಿಲ್ಲ ಅವರ ತಂದೆಯ ಜೊತೆ ಮಾಡಿದ್ದೇನೆ ಎಂದರೆ ಸಾಕ್ಷಿ ಆರೋಪಿ ಜೊತೆನೂ ಮಾಡಿದ್ದೇನೆ. ಆರೋಪಿ ತಂದೆಯ ಜೊತೆನೂ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಿಃ 13.01.2022 ರಂದು ರೂ 5 ಸಾವಿರ ಮೊತ್ತವನ್ನು ಆರೋೀಪಿ ನನ್ನ ಮಗನ ಖಾತೆಗೆ ಹಾಕಿದ್ದಾರೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಅವರ ಗಂಡ ನಮ್ಮಿಂದ ಏನು ಸಾಲ ಪಡೆದಿದ್ದರು ಅಂನ್ನು ಈಗಾಗಲೇ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರು ಹಣ ಕೊಡದೇ ಇದ್ದುದಕ್ಕೆ ನಾವು ಈ ಪ್ರಕರಣ ಮಾಡಿದ್ದೇವೆ ಎಂದು ನುಡಿಯುತ್ತಾರೆ.

ಆರೋಪಿ ಕಡೆಯಿಂದ ನಾನು 3 ಚೆಕ್ಕು ಪಡೆದಿದ್ದೆ. ಆರೋಪಿ ಕಡೆಯಿಂದ ನಾನು ಒಟ್ಟು 6 ಚೆಕ್ಕು ಪಡೆದಿದ್ದು ಇನ್ನು 3 ಚೆಕ್ಕುಗಳು ನನ್ನ ಬಳಿ ಇವೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ 3 ಪ್ರಕರಣಗಳನ್ನು ಹಾಕಿದ್ದು ಬೇರೆ ಪ್ರಕರಣಗಳನ್ನು ಹಾಕಿರುವುದಿಲ್ಲ. ಈ ನ್ಯಾಯಾಲಯದಲ್ಲಿ ಒಟ್ಟು 8 ರಿಂದ 9 ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಯಾರೂ ಪ್ರಕರಣಗಳನ್ನು ಮಾಡಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತಿದ್ದು ಆರೋಪಿ ಮೊದಲಿಗೆ ಸರಿಯಾಗಿ ಹಣ ಪಾವತಿ ಮಾಡುತ್ತಿದ್ದು ಅವರ ಅಂಗಡಿ ಲುಕ್ಸಾನು ಆದ ನಂತರ ಅವರು ಬಡ್ಡಿ ಮಾತ್ರ ಪಾವತಿಸುತ್ತಾ ಬಂದರು ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ.  ನಾನು ಖಾಲಿ ಬಾಂಡ ಮೇಲೆ ಆರೋಪಿಯ ಸಹಿ ಪಡೆದಿದ್ದೆ ಎಂದರೆ ಸರಿಯಲ್ಲ. ನನಗೆ ಹೇಗೆ ಬೇಕೊ ಹಾಗೆ ಅನುಕೂಲಕ್ಕೆ ತಕ್ಕ ಹಾಗೆ ಟೈಪ್ ಮಾಡಿಸಿಕೊಂಡೆ ಎಂದರೆ ಸರಿಯಲ್ಲ. 2021 ರಲ್ಲಿ ನೀಡಿದ ಸಾಲವೆ ಮುಟ್ಟದೇ ಇದ್ದಾಗ ಮತ್ತೆ ಹೇಗೆ ಸಾಲ ಕೊಟ್ಟಿದ್ದಿರಿ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ಆರೋಪಿಯ ತಂದೆ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಅಂದಿದ್ದರಿಂದ ನಾನು ಸಾಲ ಕೊಟ್ಟೆ ಎಂದು ನುಡಿಯುತ್ತಾರೆ. ಆರೋಪಿಯ ತಂದೆ ಸಾಲ ಪಡೆದಿದ್ದು ಆರೋಪಿ ಅದಕ್ಕೆ ಜಾಮೀನುದಾರಳಾಗಿದ್ದಾಳೆ. ನನ್ನ ಬಳಿ ಹಣವೂ ಇರಲಿಲ್ಲ ಹಾಗೂ ಆರೋಪಿಗೆ ಸಾಲನೂ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನಗದು ರೂಪದಲ್ಲಿ ಆರೋಪಿಗೆ ಹಣ ಕೊಟ್ಟಿದ್ದೇನೆ. ಆರೋಪಿ ತಿಂಗಳು ತಿಂಗಳು ಹಣ ಪಾವತಿ ಮಾಡಿ ಸಾಲ ಮುಟ್ಟಿಸಿದ್ದಾರೆ ಎಂದರೆ ಸಾಕ್ಷಿ ಅವರು ಸಾಲ ಮರುಪಾವತಿ ಮಾಡದೇ ಇದ್ದುದಕ್ಕೆ ಈ ಪ್ರಕರಣಗಳನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಈಗಾಗಲೇ ಸಾಲ ಮರುಪಾವತಿ ಮಾಡಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ಚೆಕ್ ಬೌನ್ಸ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

(ಶ್ರೀ ರಮೇಶ ಎಸ್ ಗಾಣಿಗೇರ)

**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**